ಐದು ಸಾವಿರ ರೂಪಾಯಿ ಲಂಚಕ್ಕೆ ತೀರ್ಮಾನವಾಯಿತು. ಚಿಕ್ಕಮ್ಮ ಮತ್ತು ಲೋಕಿಗೆ ಸಿಡಿಲು ಹೊಡೆದಂತಾಯ್ತು. ಆದರೆ ಲೋನ್ಲಿಂಗನು, 'ಸಬ್ಸಿಡಿಗೆ ಹೋಲಿಸಿದರೆ ಐದು ಸಾವಿರ ರೂಪಾಯಿ ಏನೂ ಅಲ್ಲ. ದೊಡ್ಡ ಸಬ್ಸಿಡಿ ಬರುವಾಗ ಸಣ್ಣ ಅಮೌಂಟಿಗೆ ಯಾಕೆ ವರಿ ಮಾಡ್ತೀಯ. ಇದೆಲ್ಲ ಇದ್ದದ್ದೇ. ಈ ಆಫೀಸರ್ರೇ ಬೆಟ್ರು. ಬ್ಯಾರೇರಾಗಿದ್ರೆ ಇದರ ಡಬ್ಬಲ್ ಕೇಳ್ತಿದ್ರು' ಎಂದು ಸಮಜಾಯಿಷಿ ಕೊಟ್ಟ ಲೋನ್ಲಿಂಗನ ಬಳಿ ಎಲ್ಲ ಸಮಸ್ಯೆಗಳಿಗೂ ಪರಿಹಾರಗಳಿದ್ದವು.

'ಸಬ್ಸಿಡಿ ಎಷ್ಟು ಬರ್ತೈತೆ ಅಂತ ಹೇಳ್ದೆ ನಾನು?' ಎಂದು ಕೇಳಿದ.

'ಮೂವತ್ತೊಂದು ಸಾವಿರ ಅಂದ್ಯಲ್ಲ' ಅಂದಳು ಚಿಕ್ಕಮ್ಮ.

'ಮತೆ? ಐದು ಸಾವಿರಕ್ಕೆ ಯಾಕೆ ಹಿಂದೇಟು ಹಾಕ್ತೀಯ? ಬೆನೆಫಿಷಿಯರಿ ಸೆಲೆಕ್ಟ್ ಮಾಡಕೆ ಒಂದು ಕಮಿಟಿ ಇರ್ತತೆ. ಕಮಿಟಿ ಮೆಂಬರಿಗೆಲ್ಲ ಒಂದೊಂದು ಸಾವಿರ ಬ್ಯಾಡೇನವ್ವ? ಇಡೀ ಹೋಬ್ಳಿಗೆ ಹತ್ತು ಜನಕ್ಕೆ ಮಾತ್ರ ಈ ಸ್ಕೀಮು! ಆಫೀಸರುಗಳು ಎಮ್ಮೆಲ್ಲೆ ಮಂತ್ರಿಗಳಿಗೆ ಉತ್ತರ ಕೊಡ್ಬೇಕು. ಅವ್ರಿಗೆಲ್ಲಾ ಊಟ ಹಾಕಿಸ್ಬೇಕಲ್ಲವ್ವ ಚಿಕ್ಕಮ್ಮ, ಅವ್ರು ಕುಡಿಯೋ ಕಾಫಿ ನೂರು ರೂಪಾಯಿಗೊಂದು ಕಪ್ಪು' ಎಂದ.

ಚಿಕ್ಕಮ್ಮ, 'ಆಯ್ತು ತಗ ಕೊಡ್ತೀನಿ' ಎಂದಳು. ಅದರಲ್ಲಿ ಯಾರ್‍ಯಾರ ಪಾಲು ಎಷ್ಟು ಎಂಬುದು ಯಾರಿಗೂ ಗೊತ್ತಾಗದಂತಿತ್ತು. ಅದೇ ಮೊದಲ ಬಾರಿಗೆ ಚಿಕ್ಕಮ್ಮ ಲಂಚ ಪ್ರಪಂಚಕ್ಕೆ ಎದುರಾದದ್ದು.

ಮುಂದೆ ಚಿಕ್ಕಮ್ಮನ ಓಡಾಟ ಪಶು ಆಸ್ಪತ್ರೆಗೆ ಶುರುವಾಯ್ತು. ಲೋನ್ಲಿಂಗನಿಲ್ಲದೆ ಚಿಕ್ಕಮ್ಮನ ಕೈಕಾಲು ಸಹ ಆಡದಂತಾಗಿದ್ದವು. ಮನೆ ಹತ್ರ ದನಗಳ ಚಿಕಿತ್ಸೆಗೆ ಬಂದಾಗ ಡಾಕ್ಟರ್‌ಗಳು ಬಹಳ ಸುಲಭವಾಗಿ ಮಾತಿಗೆ ಸಿಗುತ್ತಿದ್ದರು. ಆದರೆ, ಕಚೇರಿಗಳಲ್ಲಿ ಅವರನ್ನು ಮಾತನಾಡಿಸುವುದೇ ಕಷ್ಟವಾಗುತ್ತಿತ್ತು.

'ಚಿಕ್ಕಮ್ಮ, ಸರ್ಕಾರದ ಎಲ್ಲ ಯೋಜನೆಗಳೂ ಹಿಂಗೆಯ! ಸರ್ಕಾರ ಏನಾದ್ರೂ ರೂಲ್ಸ್ ಮಾಡ್ಲಿ, ಈ ಹೆಗ್ಗಣಗಳು ರೂಲ್ಸ್‌ಗಳನ್ನೇ ಬಗೆದು ಬಿಲ ತೋಡಿಕೊಳ್ತವೆ. ರೂಲ್ಸ್‌ಗಳನ್ನು ಬೇಕರೀಲಿ ಬ್ರೆಡ್ ಕೂದಂಗೆ ಕೂದಾಕ್ಬಹುದು' ಎಂದ ಲೋನ್ಲಿಂಗ.

ಅಂತೂ ಇಂತೂ ಚಿಕ್ಕಮ್ಮನ ಹೆಸರು ಫಲಾನುಭವಿಗಳ ಪಟ್ಟಿಯಲ್ಲಿ ಸೇರ್ಪಡೆಯಾಯಿತು. ಅವಳಿಗೆ ಸೀಮೆಹಸು ಸಾಕಣೆ ಬಗ್ಗೆ ಮೂರು ದಿನದ ತರಬೇತಿ ನೀಡಲಾಯಿತು. ಹುಟ್ಟಿನಿಂದ ಇಲ್ಲಿಯವರೆಗೂ ದನದ ಕೊಟ್ಟಿಗೆಯಲ್ಲಿ ಬೆಳೆದು ಬಂದವಳಿಗೆ ಮೂರು ದಿನದ ತರಬೇತಿಯ ನಾಟಕ ನಗು ಉಕ್ಕಿಸುತ್ತಿತ್ತು. ತರಬೇತಿಯಲ್ಲಿ ಊಟಕ್ಕೆ, ಪ್ರಯಾಣದ ವೆಚ್ಚಕ್ಕೆ ಎಂದು ಅಧಿಕಾರಿಗಳು ಲೆಕ್ಕ ಹಾಕಿ ಕೊಡುತ್ತಿದ್ದ ದುಡ್ಡು ಇಸಿದುಕೊಳ್ಳುವಾಗ ತಾನೊಬ್ಬ ತಿರುಪೆಯವಳಂತೆ ಅನಿಸುತ್ತಿತ್ತು.

ಚಿಕ್ಕಮ್ಮನ ಮನೆಯ ಗೋಡೆಗೆ ಲಗತ್ತಾಗಿರುವಂತೆ ಕೊಟ್ಟಿಗೆ ಇತ್ತು. ಅಲ್ಲಿಯೇ ಅವರ ಎಮ್ಮೆಗಳು ತಲೆತಲಾಂತರದಿಂದ ಮಹದಾನಂದದಿಂದ ಬಾಳಿ ಬದುಕಿದ್ದವು. ಒಡತಿಯಾದ ಚಿಕ್ಕಮ್ಮ ಹಾಕಿದ ಮೇವನ್ನು ತಿಂದು, ಇಟ್ಟ ಮುಸುರೆ ಕುಡಿದು, ಅಡವಿಯಲ್ಲಿ ಮೇದು, ಏನನ್ನೂ ಬೇಡದೆ, ಕಾಯಿಲೆ ಕಸಾಲೆಯೆನ್ನದೆ ಗಾಂಧಿ ಮಹಾತ್ಮನಂತೆ ಸರಳವಾಗಿದ್ದವು. ಪ್ರಕೃತಿ ಒಪ್ಪಿದಾಗ ಗರ್ಭವಾಗಿದ್ದವು. ಕರು ಹಾಕಿದ್ದವು. ಬೇಡವೆಂದಾಗ ಸತ್ತು ಹೋಗಿದ್ದವು. ಸದ್ಯ ಚಿಕ್ಕಮ್ಮನ ಕೊಟ್ಟಿಗೆಯಲ್ಲಿ ಒಂದು ಕರಾವಿನ ಎಮ್ಮೆ ಇತ್ತು. ಕರ್ರಗೆ ಮಿಂಚುತ್ತಿದ್ದ ಎಮ್ಮೆ ಮುಲಾಜಿಲ್ಲದೆ ಎರಡು ವರ್ಷ ಹಾಲು ಕೊಡುತ್ತಿತ್ತು. ಅಲ್ಲಿಯವರೆಗೂ ಲೋಕಿಯ ಇಬ್ಬರು ಹೆಣ್ಣುಮಕ್ಕಳ ಬಟ್ಟೆಬರೆ, ವಿದ್ಯಾಭ್ಯಾಸ, ಆರೋಗ್ಯ ಹೆಚ್ಚು ಕಡಿಮೆ ಸುರಕ್ಷಿತವೇ ಆಗಿರುತ್ತಿದ್ದವು.

ಆ ಕೊಟ್ಟಿಗೆಯನ್ನು ಲೋನ್ಲಿಂಗನ ಸಲಹೆಯಂತೆ ರಿಪೇರಿ ಮಾಡಿ ಎರಡು ಮೂರು ಹಸುಗಳು ನಿಲ್ಲುವಂತೆ ದೊಡ್ಡದು ಮಾಡಿ ಫೋಟೊ ತೆಗೆದು ಪಶು ಆಸ್ಪತ್ರೆಗೆ ಕೊಟ್ಟು ಬಂದರು. ಡಾಕ್ಟ್ರು ಅದನ್ನು ಒಪ್ಪದೇ ಹೋದರು. ಚಿಕ್ಕಮ್ಮ, ಲೋಕಿ ಇಬ್ಬರೂ ಸೇರಿ ಗಾರೆಯವರ ಜೊತೆ ಮತ್ತೆ ಗೋಡೆಗಳ